# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 879 |
| ಮಾನ್ಯ ಸದಸ್ಯರ ಹೆಸರು | ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18-12-2018 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಖಾಸಗಿ ಆಸ್ಪತ್ರೆಗಳು / ವೈದ್ಯಕೀಯ ಸಂಸ್ಥೆಗಳು ಸಾರ್ವಜನಿಕರಿಂದ ದುಬಾರಿ ವೈದ್ಯಕೀಯ ಶುಲ್ಕಗಳನ್ನು ಪಡೆಯುತ್ತಿದ್ದು; ಇದರ ನಿಯಂತ್ರಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಹೌದು ಬಂದಿದೆ.<br>"ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ ಅಧಿನಿಯಮ-2007" ಮತ್ತು "ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ ನಿಯಮಗಳು-2009" ಅಧಿನಿಯಮದ ಸೆಕ್ಷನ್ 10ರಂತೆ ಖಾಸಗಿ ವೈದ್ಯಕೀಯ ಸಂಸ್ಥೆಗಳು ರೋಗಿಗಳ ಹಾಗೂ ಸಾಮಾನ್ಯ ಜನರ ತಿಳುವಳಿಕೆಗಾಗಿ ವಿವಿಧ ಸೇವೆಗಳಿಗೆ ಸಂದಾಯ ಮಾಡತಕ್ಕ ಚಾರ್ಜ್‌ಗಳ ಪಟ್ಟಿಯನ್ನು ಪ್ರದರ್ಶಿಸಬೇಕು ಹಾಗೂ ಕಿರು ಹೊತ್ತಿಗೆಗಳಲ್ಲಿ ಲಭ್ಯವಾಗುವಂತೆ ಮಾಡಬೇಕು. ಆಯಾ ಆಸ್ಪತ್ರೆಗಳು ಪ್ರಕಟಿಸಿದ ಚಾರ್ಜ್‌ಗಿಂತ ಹೆಚ್ಚಿನ ದರ ವಿಧಿಸುವಂತಿಲ್ಲ. ಸದರಿ ಅಧಿನಿಯಮದಲ್ಲಿ ಸೇವೆಗಳ ದರಗಳನ್ನು ಇಲಾಖೆಯಿಂದ ನಿಗಿಧಿಪಡಿಸಲು ಅವಕಾಶವಿರುವುದಿಲ್ಲ. ಆಯಾ ಆಸ್ಪತ್ರೆಗಳೇ ವೈದ್ಯರ ತಜ್ಞತೆಗೆ ಅನುಸಾರವಾಗಿ ಆಸ್ಪತ್ರೆಯಲ್ಲಿ ದೊರೆಯುವ ಮೂಲ ಭೂತ ಸೌಲಭ್ಯಗಳಿಗನುಸಾರವಾಗಿ ಕೈಗೊಂಡ ಪರೀಕ್ಷೆಗಳು ಮತ್ತು ನೀಡಿದ ಚಿಕಿತ್ಸೆ / ಶಸ್ತ್ರಚಿಕಿತ್ಸೆಗಳಿಗನುಗುಣವಾಗಿ ದರಗಳನ್ನು ವಿಧಿಸಬೇಕಾಗಿರುತ್ತದೆ. |
| ಆ) | ಯಾವ ಯಾವ ಚಿಕಿತ್ಸೆಗೆ ಮತ್ತು ಶಸ್ತ್ರ ಚಿಕಿತ್ಸೆಗೆ ಎಷ್ಟೆಷ್ಟು ಹಣ ಪಾವತಿಸಬೇಕೆಂದು ಶುಲ್ಕವನ್ನು ನಿಗಧಿಪಡಿಸಿ ಆಸ್ಪತ್ರೆಗಳ (ನರ್ಸಿಂಗ್ ಹೋಂಗಳಲ್ಲಿ) ಫಲಕದಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕೆಂಬ ನಿಯಮವನ್ನು ಜಾರಿಗೆ ತರಲು ಸರ್ಕಾರ ಯೋಚಿಸುತ್ತದೆಯೇ; | |
| ಇ) | ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳ ನಡೆಸುತ್ತಿರುವ ಶೋಷಣೆಯನ್ನು ತಪ್ಪಿಸಲು ಸರ್ಕಾರ ಯಾವ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತದೆ? | ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳು ನಡೆಸುತ್ತಿರುವ ಶೋಷಣೆಯನ್ನು ತಪ್ಪಿಸುವ ನಿಟ್ಟಿನಲ್ಲಿ ಕೆಪಿಎಂಇ ಕಾಯ್ದೆಯ ತಿದ್ದುಪಡಿ ವಿಧೇಯಕವನ್ನು ದಿನಾಂಕ: 6-01-2018 ಹಾಗೂ ಕೆಪಿಎಂಇ ನಿಯಮಗಳು ದಿನಾಂಕ: 27-03-2018 ರಂದು ರಾಜ್ಯ ಪತ್ರ ಹೊರಡಿಸಿ ಅನುಷ್ಠಾನಗೊಳಿಸುತ್ತಾ ಶೋಷಣೆಯನ್ನು ತಪ್ಪಿಸಲು ಕ್ರಮವಹಿಸಲಾಗುತ್ತಿದೆ.<br>ಆಸ್ಪತ್ರೆಯವರು ನಿಗದಿಪಡಿಸಿ/ ಪ್ರಕಟಿಸಿದ ಚಾರ್ಜ್‌ಗಿಂತ ಹೆಚ್ಚಿನ ದರ ವಿಧಿಸುವಂತಿಲ್ಲ. |

ಸಂಖ್ಯೆ: ಆಕುಕ 879 ಚು.ರ. 2018

(ಶಿವಾನಂದ ಎಸ್. ಪಾಟೀಲ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು